
# ಶ್ರೀರಾಮಕೃಷ್ಣರ ಬೋಧನಕ್ರಮ

ಡಾ. ಡಿ.ಕೆ. ರಾಜೇಂದ್ರ

'ಆಚಾರ್ಯಾಣಾಂ ಮಹಾಚಾರ್ಯಃ' ಎಂದು ಸ್ತುತಿಸಲ್ಪಟ್ಟಿರುವ ಯುಗಾವತಾರ ಶ್ರೀರಾಮಕೃಷ್ಣರು ಅಸಾಧಾರಣ ಗುರುವಾಗಿದ್ದರು. ಅವರು ಭಾರತೀಯ ಆಧ್ಯಾತ್ಮಿಕ ಪರಂಪರೆಯ ಆದರ್ಶ ಗುರುವಿಗೆ ಉತ್ತಮ ಪ್ರತಿನಿಧಿಯಾಗಿದ್ದಾರೆ. ಅವರ ಬೋಧನ ಕ್ರಮವನ್ನು ಕುರಿತು ಬರೆದಿರುವ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.



ಭಗವಾನ್ ಶ್ರೀರಾಮಕೃಷ್ಣರು ಶಾಲೆಗೆ ಹೋಗಿ ಅಕ್ಷರ ಕಲಿತವರಲ್ಲ. ತಮ್ಮ ಹೆಸರನ್ನೂ ಸರಿಯಾಗಿ ಬರೆಯಲಾಗದ ಅಕ್ಷರ ಕಲಿಕೆ ಅವರದ್ದು. ಆದರೆ ಬೋಧನಾ ಕ್ಷೇತ್ರದಲ್ಲಿ ಅದ್ವಿತೀಯರೆನಿಸಿದವರು. ಅವರ ಚಿಂತನೆಗಳನ್ನು ಕೇಳಲು ನೂರಾರು ಜನ ಒಟ್ಟೊಟ್ಟಿಗೆ ಕಾತರರಾಗಿ ಕಾಯುತ್ತಿದ್ದರು. ತದೇಕಚಿತ್ತದಿಂದ ಆಲಿಸುತ್ತಿದ್ದರು. ಪ್ರಶ್ನೆ-ಮರುಪ್ರಶ್ನೆಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಉತ್ತರ ಪಡೆಯುತ್ತಿದ್ದರು. ಅವರ ಬೋಧನೆ ಲೋಕಜ್ಞಾನವನ್ನೂ ಒಳಗೊಂಡಂತೆ ಆಧ್ಯಾತ್ಮಿಕ ಲೋಕದ ಸಂಗತಿಗಳನ್ನು ತಲಸ್ಪರ್ಶಿಯಾಗಿ ಒಳಗೊಂಡಿರುತ್ತಿತ್ತು. ಅವರಿಂದ ಪಾವನವಾದವರು ಅದೆಷ್ಟೋ ಮಂದಿ. ಅವರ ಬೋಧನೆಯ ಕ್ರಮವೇ ವಿಭಿನ್ನ ರೀತಿಯದಾಗಿರುತ್ತಿತ್ತು, ವಿಶಿಷ್ಟ ರೀತಿಯದಾಗಿರುತ್ತಿತ್ತು. ಅದು ಕೇಳುಗರ ಮೈಮರೆಸುತ್ತಿತ್ತು. ಅಷ್ಟು ಹೊತ್ತೂ ಅವರು ಕಣ್ಣು ಮುಚ್ಚಿ, ಕಿವಿ ತೆರೆದು ಶ್ರದ್ಧೆಯಿಂದ ಆಲಿಸುವಂತಿರುತ್ತಿತ್ತು. ಎಷ್ಟೋ ವೇಳೆ ಇದನ್ನು ಕಂಡು ರಾಮಕೃಷ್ಣರಿಗೇ ಅಚ್ಚರಿ ಉಂಟಾದದ್ದೂ ಇದೆ. ಆದರೆ ಕೇಳುಗ ಭಕ್ತರು ಮಾತ್ರ ಅವರ 'ತೀರ್ಥವಾಣಿ'ಗೆ ಹಾತೊರೆಯುತ್ತಿದ್ದರು. ಅದರ ಪರಿ ಹೇಗಿತ್ತೆಂದರೆ ಕುವೆಂಪು ಅವರು ಹೇಳುವಂತೆ:

ಸಂಜೆಯಾಗಲು ತವಕಿಪುದು ಮನ ದಕ್ಷಿಣೇಶ್ವರ ಯಾತ್ರೆಗೆ
ಪರಮಹಂಸರ ತೀರ್ಥವಾಣಿಯ ಪಂಚ ಅಮೃತದ ಪಾತ್ರೆಗೆ।

ಅಂತಹ ಮಾತಿನ ಮೋಡಿ ಅವರದಾಗಿತ್ತು. ಅಲ್ಲಿ ಸಾಧು ಸಂತರು, ಗೃಹಿಭಕ್ತರಾದಿಯಾಗಿ ಎಲ್ಲರೂ ಲಿಂಗಭೇದವಿಲ್ಲದೆ, ವಯೋಭೇದವಿಲ್ಲದೆ ಭಾಗವಹಿಸುತ್ತಿದ್ದರು. ಈಶ್ವರಚಂದ್ರ ವಿದ್ಯಾಸಾಗರ, ಕೇಶವಸೇನ ಅವರಂತಹ ಘನ ವಿದ್ವಾಂಸರು ಅವರ ಮಾತುಗಳನ್ನು ಆಲಿಸಲು ಕಾತರರಾಗಿರುತ್ತಿದ್ದರು. ಇದಕ್ಕೆಲ್ಲ ಕಾರಣವಾದದ್ದಾದರೂ ಏನು? ಅವರು ಹೇಳುತ್ತಿದ್ದ ವಿಷಯವೆ? ಅಥವಾ ಅವರು ಹೇಳುತ್ತಿದ್ದ ಕ್ರಮವೆ? ಆಲೋಚಿಸಿದರೆ ವಿಷಯದ ಜೊತೆಗೆ ಅವರು ಹೇಳುತ್ತಿದ್ದ ಕ್ರಮವೇ ಪ್ರಧಾನವಾಗಿತ್ತು. ಅದರ ಪರಿಣಾಮವೇ ಹೆಚ್ಚಾಗಿರುತ್ತಿತ್ತು. 'ಶ್ರೀರಾಮಕೃಷ್ಣ ವಚನವೇದ' ಅದಕ್ಕೆ ಸಾಕ್ಷೀಭೂತವಾಗಿ ನಮ್ಮೆದುರಿಗಿದೆ. ಶ್ರೀರಾಮಕೃಷ್ಣ ವಚನವೇದ 'ವೇದ'ಕ್ಕೆ ಸಮಾನಗ್ರಂಥ ಎಂದೇ ಪರಿಗಣಿತವಾಗಿದೆ. ಅಷ್ಟೊಂದು ಮೌಲಿಕ ಸಂಗತಿಗಳು ಅದರಲ್ಲಿ ಅಡಕಗೊಂಡಿವೆ.

ಶ್ರೀರಾಮಕೃಷ್ಣರಿಗೆ ಬೋಧನ ಕಲೆ ಒಂದು ವಿಶಿಷ್ಟ ಕಲೆಯಾಗಿ ಕರಗತವಾಗಿತ್ತು. ಅನಾಯಾಸವಾಗಿ ಅವರಿಂದ ಅದು ರೂಪು

ಗೊಂಡು ಹೊರಹೊಮ್ಮುತ್ತಿತ್ತು. ಅವರ ಹದಿನಾರು ಮಂದಿ ನೇರ ಶಿಷ್ಯರು ಇದರಿಂದಾಗಿಯೇ ಪ್ರಭಾವಿತರಾದವರು. ಅವರನ್ನು ಪರೀಕ್ಷಿಸಲೆಂದು ಬಂದ ನರೇನ್ ಕೂಡ ನಂತರ ಅವರಿಂದ ಪ್ರಭಾವಿತನಾಗಿ ಸ್ವಾಮಿ ವಿವೇಕಾನಂದರಾಗಿ ಪರಮ ಶಿಷ್ಯರಲ್ಲಿ ಪ್ರಮುಖನಾದ. ಮಹೇಂದ್ರನಾಥ ಗುಪ್ತ ನಂತರ ಮಾಸ್ಟರ್ ಮಹಾಶಯನಾಗಿ ಖ್ಯಾತನಾದ. 'ಶ್ರೀರಾಮಕೃಷ್ಣ ವಚನವೇದ' ಮೇರು ಕೃತಿಗೆ ಕಾರಣನಾದ. ಅಸಂಖ್ಯಾತ ಗೃಹೀಭಕ್ತರು ಅವರ ವಾಣಿಯಿಂದ ಪ್ರಭಾವಿತರಾಗಿ ಧನ್ಯರಾದರು. ಇಂದಿಗೂ ಆಗುತ್ತಿದ್ದಾರೆ, ಮುಂದೆಯೂ ಆಗುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಅಥವಾ ಯಾವುದೇ ಅರಿವಿನ ರಂಗದಲ್ಲಿ ಬೋಧನಾ ಕ್ರಮ ಎಷ್ಟು ಮುಖ್ಯ ಎಂಬುದನ್ನು ನಾವು ಅರಿತಂತಿಲ್ಲ. ಶಿಕ್ಷಣ ಅಥವಾ ಬೋಧನೆ ಎಂದರೆ ಕೇವಲ ವಿಷಯದ ವರ್ಗಾವಣೆ ಎಂದು ಭಾವಿಸಿದಂತಿದೆ. ಅದೊಂದು ಕರ್ತವ್ಯ ಎಂದು ತಿಳಿದಂತಿದೆ. ಆದರೆ ಅದಷ್ಟೇ ಆದರೆ ಇಂದಿನ ಯಂತ್ರ ಯುಗದಲ್ಲಿ ಮತ್ತೊಂದು ಯಂತ್ರ ಆ ಕೆಲಸವನ್ನು ಸುಲಭವಾಗಿ ಮಾಡಬಲ್ಲದು – ಮಾಡುತ್ತದೆ. ಆದರೆ ಅದಕ್ಕೆ ಜೀವ ತುಂಬಬೇಕಾದರೆ ಅದಕ್ಕೆ ಭಾವಗಳ, ಭಾವನೆಗಳ ಸ್ಪರ್ಶ ಬೇಕಾಗುತ್ತದೆ. ಪಠ್ಯಕ್ಕೆ ಹೊರತಾದ ಸಂಗತಿಗಳ ಅರಿವೂ ಇರಬೇಕಾಗುತ್ತದೆ. ನಿರ್ದಿಷ್ಟ ಸ್ಥಳ ಮುಟ್ಟಲು ಒಂದು ಸಮರ್ಥವಾದ ವಾಹನದ ಅಗತ್ಯ ಮುಖ್ಯವಾಗುವಂತೆ, ಗುರಿ ತಲುಪಲೂ ಅಷ್ಟೇ ಸಮರ್ಥವಾದ ಬೋಧನಾಕ್ರಮವೂ ಅಗತ್ಯ. ಗುರಿ ತಲುಪುವುದು ಅಷ್ಟೇ ಮುಖ್ಯವಾಗಬಾರದು, ಮಾರ್ಗ ಸವೆಸುವುದೂ ಅಷ್ಟೇ ಮುಖ್ಯವಾಗುವಂತಿರಬೇಕು. ಆಗ ಪ್ರಯಾಣ ಸುಖಮಯವಾಗಿರಲು ಸಾಧ್ಯ! ಆಹ್ಲಾದದಿಂದ ಕೂಡಿರಲು ಸಾಧ್ಯ! ಶ್ರೀರಾಮಕೃಷ್ಣರ ಬೋಧನೆ ಆ ರೀತಿಯದಾಗಿತ್ತು.

ಶ್ರೀರಾಮಕೃಷ್ಣರ ಉಪದೇಶಾಮೃತ ಲೋಕ ಹೃದಯಕ್ಕೆ ತಲುಪಲು ಕಾರಣವಾದದ್ದು ಅವರ ಬೋಧನಾ ಕ್ರಮವೇ. ಅದು ಸಹಜವಾಗಿತ್ತು, ಸರಳವಾಗಿತ್ತು. ದೃಷ್ಟಾಂತಗಳ ಸರಮಾಲೆಯಾಗಿರುತ್ತಿತ್ತು. ಒಂದು ವಿಷಯವನ್ನು ಮನದಟ್ಟಾಗಿಸಲು ಈ ಮೂರೂ ಮುಖ್ಯ. ಸರಳತೆ, ಸಹಜತೆ ಹಾಗೂ ದೃಷ್ಟಾಂತ, ಯಾವುದೇ ವಿಷಯವನ್ನು ಬೇಗ ಗ್ರಹಿಸಲು ಇವು ಕಾರಣವಾಗುತ್ತವೆ. ಜೊತೆಗೆ ಯಾವ ಯಾವ ವಿಷಯವನ್ನು ಯಾರ್ಯಾರಿಗೆ ಹೇಗೆ ಮುಟ್ಟಿಸಬೇಕು ಎಂಬ ಕಲೆಯೂ ತಿಳಿದಿರಬೇಕಾಗುತ್ತದೆ. ಇವೆಲ್ಲವೂ ಶ್ರೀರಾಮಕೃಷ್ಣರಲ್ಲಿ ಸ್ವಾಭಾವಿಕವಾಗಿಯೇ ಹುಟ್ಟಿನಿಂದ ಬಂದವುಗಳಾಗಿದ್ದುವು. ಸಾಹಿತ್ಯದ ಸೊಬಗನ್ನು ಹೆಚ್ಚಿಸಲು ಅಲಂಕಾರಗಳು ಉಪಮಾನ ಉಪಮೇಯಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗುತ್ತವೆ ಬೋಧನಾ ಕ್ರಮದಲ್ಲಿ ದೃಷ್ಟಾಂತಗಳು. ಮಕ್ಕಳಲ್ಲಿ ಆಸಕ್ತಿ ಮೂಡಿಸಲು, ವಿಷಯ ಗ್ರಹಣ ಶಕ್ತಿಯನ್ನು ಹೆಚ್ಚಿಸಲು ಇವು ಅನಿವಾರ್ಯ. ಶಿಕ್ಷಕರಿಗೆ ಇವುಗಳ ಬಗೆಗಿನ ವಿಶೇಷ ತರಬೇತಿಗಳ ಆವಶ್ಯಕತೆಯೂ ಇದೆ. ಶ್ರೀರಾಮಕೃಷ್ಣರ ಬೋಧನಾ ರೀತಿಯನ್ನು ಪ್ರಮುಖವಾಗಿ ಮೂರು ಭಾಗಗಳಾಗಿ ಗುರುತಿಸ ಬಹುದು. **ಒಂದು :** ತಮ್ಮತನದಿಂದಲೇ ಸ್ಫೂರ್ತಿಯಾಗುವುದು, **ಎರಡು:** ಗೃಹೀಭಕ್ತರಿಗೆ ಉಪದೇಶ, **ಮೂರು:** ಇತರ ಸಾಮಾನ್ಯ ಭಕ್ತರೊಂದಿಗಿನ ಪ್ರಶ್ನೋತ್ತರ.

*** ತಮ್ಮತನದಿಂದಲೇ ಸ್ಫೂರ್ತಿ :** ಶ್ರೀರಾಮಕೃಷ್ಣರ ಬದುಕೇ ಒಂದು ಮಹಾಕಾವ್ಯ, ಮಹಾ ಪರ್ವತ. ಅವರದು ವಿಶಿಷ್ಟ ಹಾಗೂ ವಿಚಿತ್ರ ವ್ಯಕ್ತಿತ್ವ. 'ಸರ್ವ ದೇವದೇವೀ ಸ್ವರೂಪಿ'ಯೆನಿಸಿದ ಅವರ ನಡೆನುಡಿ ಎಲ್ಲವೂ ಪವಿತ್ರ. ಹಾಗಾಗಿಯೇ ಪರೀಕ್ಷಿಸಲೆಂದು ಬಂದ ನರೇಂದ್ರನಾಥ ಅವರ ಉಪದೇಶಾಮೃತದಿಂದ ಮೋಹಿತನಾಗಿ ಪರಮಭಕ್ತನೇ ಆದ. ಶ್ರೇಷ್ಠ ನಟ, ನಾಟಕಕಾರ, ನಿರ್ದೇಶಕ ಎಂದು ಪ್ರಸಿದ್ಧನಾಗಿದ್ದರೂ ದಾರಿತಪ್ಪಿ ಲಂಪಟನಾಗಿದ್ದ ಗಿರೀಶ್‌ಚಂದ್ರ ಘೋಷ್ ರಾಮಕೃಷ್ಣರ ವ್ಯಕ್ತಿತ್ವಕ್ಕೆ, ಉಪದೇಶಾಮೃತಕ್ಕೆ ಮನಸೋತು ಅವರ ಪರಮ ಭಕ್ತನಾದ. ಮಾಸ್ಟರ್ ಮಹಾಶಯ ಅವರ ಒಂದೊಂದು ನುಡಿಯನ್ನು ಕೃತಿರೂಪಕ್ಕೆ ತರುವುದರ ಮೂಲಕ ಜೀವನವನ್ನು ಪಾವನವಾಗಿಸಿಕೊಂಡ. ಇಂತಹವರ ಸಂಖ್ಯೆ ಅಸಂಖ್ಯಾತ. ಇದಕ್ಕೆಲ್ಲ ಕಾರಣವಾದದ್ದು ಶ್ರೀರಾಮಕೃಷ್ಣರ ಅಭೂತಪೂರ್ವ ವ್ಯಕ್ತಿತ್ವ, ಅವರ ಜ್ಞಾನ. ಇದರಿಂದ ಅರ್ಥವಾಗುವುದೇನೆಂದರೆ, ಕಲಿಸುವವನ ನಡೆ–ನುಡಿ, ಅವನ ಪೂರ್ಣ ವ್ಯಕ್ತಿತ್ವವೂ ಮುಖ್ಯವಾಗುತ್ತದೆ. ಮೌನವೇ ಮಾತಾಗುವ ಸಂದರ್ಭ, ಸನ್ನಿವೇಶಗಳು ಇಂತಹವರಿಂದ ಉಂಟಾಗುತ್ತದೆ. ಮೌನದ ಮಾತು ಎಷ್ಟೋ ವೇಳೆ ಮಾತಿಗಿಂತಲೂ ಹೆಚ್ಚು ಪ್ರಭಾವ ಮತ್ತು ಪರಿಣಾಮವನ್ನು ಬೀರಲು ಕಾರಣವಾಗುತ್ತದೆ. ಬೋಧನೆ ಕೇವಲ ಕರ್ತವ್ಯವಾಗಬಾರದು, ಅದೊಂದು ಭಾವ ಶುದ್ಧಿಯ, ಜ್ಞಾನದರಿವಿನ, ಲೋಕಜ್ಞಾನದ ತ್ರಿವೇಣೀಸಂಗಮವಾಗಬೇಕಾಗುತ್ತದೆ. ಅದಕ್ಕೆ ಬೌದ್ಧಿಕ ಶಕ್ತಿಯಷ್ಟೇ ಮಾನಸಿಕ ಹಾಗೂ ವ್ಯಕ್ತಿತ್ವದ ಶುದ್ಧತೆಯೂ ಪ್ರಮುಖ ಎಂಬುದು ಶ್ರೀರಾಮಕೃಷ್ಣರ ಉಪದೇಶಾಮೃತದಿಂದ ವೇದ್ಯ. ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿನ ಚುಂಬಕ ಶಕ್ತಿ ಹೇಗಿತ್ತೆಂದರೆ, ಪರೀಕ್ಷಿಸಲೆಂದು ಬಂದ ನರೇಂದ್ರನಾಥನನ್ನು ಅನಾಯಾಸವಾಗಿ ಅವರತ್ತ ಸೆಳೆದುಕೊಂಡಿತು. ಒಬ್ಬ ವಿದ್ಯಾರ್ಥಿ ಶಾಲೆಯಲ್ಲಿ ಒಂದೆರಡು ವಿಷಯಗಳಲ್ಲಿ ಹೆಚ್ಚು ಅಂಕಗಳಿಸಿ ಉಳಿದವುಗಳಲ್ಲಿ ಕಡಿಮೆ ಅಂಕ ಗಳಿಸಿದನೆಂದರೆ, ಆ ವಿದ್ಯಾರ್ಥಿ ದಡ್ಡನೆಂದು ಅರ್ಥವಲ್ಲ, ಅವುಗಳನ್ನು ಹೇಳಿಕೊಟ್ಟ ಗುರುಗಳಲ್ಲಿ ಅವನನ್ನು ಸೆಳೆಯುವ ಶಕ್ತಿ ಕಡಿಮೆ ಎಂದೇ ಅರ್ಥ. ಗುರುಗಳನ್ನು ಪ್ರೀತಿಸುವಂತೆ ಮಾಡುವ ವ್ಯಕ್ತಿತ್ವ ಅವರು ಹೇಳಿಕೊಡುವ ಪಾಠದ ಮೇಲೆಯೂ ಪ್ರಭಾವ ಬೀರಿರುತ್ತದೆ. ಗುರುಗಳನ್ನು ಪ್ರೀತಿಸುವ ಶಿಷ್ಯ, ವಿಷಯದಿಂದ ದೂರವಾಗಲು ಹೇಗೆ ಸಾಧ್ಯ?

*** ಗೃಹೀಭಕ್ತರೊಂದಿಗೆ :** ಶ್ರೀರಾಮಕೃಷ್ಣರು ಅಧ್ಯಾತ್ಮ ಬೋಧಕರಷ್ಟೇ ಅಲ್ಲ, ಅದರ ಜೊತೆಜೊತೆಯಲ್ಲಿಯೇ ಲೌಕಿಕದ ಎಲ್ಲ ಮಗ್ಗುಲುಗಳನ್ನೂ ಅತ್ಯಂತ ಮೋಹಕನಾಗಿ, ಪರಿಣಾಮಕಾರಿಯಾಗಿ ಅರಿವುಮಾಡಿಕೊಡುವ ಕೌಶಲವನ್ನು ಹೊಂದಿದ್ದರು. ಅದೊಂದು ರೀತಿ ಕಹಿಯಾದ ಅಥವಾ ಇಷ್ಟವಾಗದ ವಸ್ತುವನ್ನು ಸಿಹಿಲೇಪನದೊಂದಿಗೆ ಬೆರೆಸಿಕೊಟ್ಟಂತಿರುತ್ತಿತ್ತು. ಕೇಳುಗರು ಅತ್ಯಂತ ಆನಂದದಿಂದ ಅದನ್ನು ಸ್ವೀಕರಿಸುತ್ತಿದ್ದರು. ಅವರ ಅರಿವಿಗೆ ಬಾರದಂತೆಯೇ ಅದು ತಕ್ಕ ಪರಿಣಾಮವನ್ನು ಬೀರುತ್ತಿತ್ತು. ಈಶ್ವರ ಚಂದ್ರ ವಿದ್ಯಾಸಾಗರರಂಥ ವಿದ್ವಾಂಸರೂ ಅದನ್ನು ಸವಿದು ಆನಂದಿಸುತ್ತಿದ್ದರು. ಸಾಮಾನ್ಯರಂತೂ ಅದರಲ್ಲಿ ಮಿಂದು ಪಾವನರಾಗುತ್ತಿದ್ದರು.